International Journal of Kannada Research
www.kannadajournal.com

**ISSN: 2454–5813**
IJKR 2018; 4(2): 124-131
© 2018 IJKR
www.kannadajournal.com
Received: 23-02-2018
Accepted: 24-03-2018

**ಡಾ. ಶಿವಪ್ರಸಾದ್ ವೈ.ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರೈಸ್ಟ್ ಡೀಮ್ಡ್ ಟು ಬಿ
ಯೂನಿವರ್ಸಿಟಿ, ಹೊಸೂರು ರಸ್ತೆ,
ಬೆಂಗಳೂರು, ಮೊಬೈಲ್

**Correspondence**
**ಡಾ. ಶಿವಪ್ರಸಾದ್ ವೈ.ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರೈಸ್ಟ್ ಡೀಮ್ಡ್ ಟು ಬಿ
ಯೂನಿವರ್ಸಿಟಿ, ಹೊಸೂರು ರಸ್ತೆ,
ಬೆಂಗಳೂರು, ಮೊಬೈಲ್

# ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘ– ಶತಮಾನದ ಸ್ಮರಣೆ

**ಡಾ. ಶಿವಪ್ರಸಾದ್ ವೈ.ಎಸ್**

**ಕೃತಜ್ಞತೆಗಳು**
ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರು, ವಿವಿಧ ಗ್ರಂಥಾಲಯದ ಗ್ರಂಥಪಾಲಕರು ಮತ್ತು ವಿದ್ಯಾಗುರುಗಳಾದ ಪ್ರೊ. ಮಧುಸೂದನ ಕೆ.ಎಸ್. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಆಕರಗಳನ್ನು ಪರಿಶೀಲಿಸುವಲ್ಲಿ ನೆರವು ನೀಡಿದ ಅನೇಕ ಪ್ರಾಧ್ಯಾಪಕರುಗಳು ಮತ್ತು ಪ್ರೋತ್ಸಾಹ ನೀಡಿದ ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿಯ, ಕುಲಸಚಿವರಾದ ಡಾ. ಅನಿಲ್ ಜೋಸಫ್ ಪಿಂಟೊ ಹಾಗೂ ಮಾನವಿಕ ಮತ್ತು ಸಮಾಜ ವಿಜ್ಞಾನ ನಿಕಾಯದ ಡೀನ್ ಡಾ. ಜಾನ್ ಜೋಸೆಫ್ ಕೆನಡಿ ಅವರಿಗೆ ನಾನು ಆಭಾರಿಯಾಗಿದ್ದೇನೆ.

**ಸಾರಲೇಖ (ಅಬ್ಸಟ್ರಾಕ್ಟ್)**
ಬೆಂಗಳೂರಿನ ಸೆಂಟ್ರಲ್‌ಕಾಲೇಜ್ ಕರ್ಣಾಟಕ ಸಂಘಕ್ಕೆ ಈಗ ಶತಮಾನೋತ್ಸವದ ವಿಜೃಂಭಣೆ. ಆದರೆ ಈಗ ಕರ್ಣಾಟಕ ಸಂಘವಾಗಲಿ, ಅದರ ಕಛೇರಿಯಾಗಲಿ ಎಲ್ಲೂ ಉಳಿದಿಲ್ಲ. ಸಂಘ ಹಾಕಿಕೊಟ್ಟದಾರಿ, ತೋರಿದ ಬೆಳಕು ಮಾತ್ರ ಮಬ್ಬಾಗಿಲ್ಲ. ಸಂಘಟನೆಯನ್ನು ಸ್ಥಾಪಿಸಿದ ಅತಿರಥಮಹಾರಥರು ಮಾತ್ರ ಕನ್ನಡ ಸಾರಸ್ವತ ಲೋಕದ ಪರಿಧಿಯಲ್ಲಿ ಶಾಶ್ವತವಾಗಿದ್ದಾರೆ.
1918 ರಲ್ಲಿ ಎ.ಆರ್.ಕೃಷ್ಣಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕರ್ಣಾಟಕ ಸಂಘವನ್ನು ಸ್ಥಾಪಿಸಿದರು. ಕಿಂಚಿತ್ತೂ ಅನುಕೂಲವಿಲ್ಲದ, ಕಿಟಕಿ ಬಾಗಿಲುಗಳನ್ನೂ ಕಾಣದ ಕನ್ನಡ ಇಲಾಖೆಯಲ್ಲೇ ಸಂಘದ ಸಮಸ್ತ ಚಟುವಟಿಕೆಗಳು ಭರದಿಂದ ಜರುಗುತ್ತಿದ್ದವು. ಪ್ರಬುದ್ಧಕರ್ಣಾಟಕ ಪತ್ರಿಕೆಯ ಯೋಜನೆ, ಕನ್ನಡ ಬೆಳವಣಿಗೆಗೆ ಸೂಕ್ತ ಮಾರ್ಗೋಪಾಯ, ಭಾಷಣಗಳು, ವಿದ್ಯಾರ್ಥಿ ಬರಹಗಳು ಹಾಗೂ ಇತರ ಚಟುವಟಿಕೆಗಳಿಗೆ ಪ್ರೋತ್ಸಾಹ, ಸರಣಿ ಉಪನ್ಯಾಸಗಳು ಮತ್ತು ಪುಸ್ತಕ ಪ್ರಕಟಣೆ ಸೇರಿದಂತೆ ಹಲವಾರು ಯೋಜನೆಗಳನ್ನು ಸಾಕಾರಗೊಳಿಸಲು ಹವಣಿಸಿ, ಉತ್ತಮ ಸಾಹಿತ್ಯಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದು ವೈಶಿಷ್ಟ್ಯ. ಕರ್ಣಾಟಕ ಸಂಘ, ಸಾಹಿತ್ಯಕ್ಕೆ ವಲಯಕ್ಕೆ ಮಾತ್ರ ಸೀಮಿತಗೊಳ್ಳದೆ ಸಾಂಸ್ಕೃತಿಕ ಕೇಂದ್ರವಾಗಿಯೂ ಮುಂದುವರೆದಿದ್ದು ಅದರ ಹೆಗ್ಗಳಿಕೆ.
ವಸಾಹತು ಸಂದರ್ಭದಲ್ಲಿ, ಕನ್ನಡಸಂಘದ ಸ್ಥಾಪನೆಯ ಆಲೋಚನೆಯೇ ಒಂದು ದಿಟ್ಟ ಹೆಜ್ಜೆ. ಯೋಗಾಯೋಗವೋ ಎಂಬಂತೆ ಅಪೂರ್ವ ಹಾಗೂ ಅನೂಹ್ಯ ಪಂಡಿತರುಗಳ ಪಡೆ ಎ.ಆರ್.ಕೃಷ್ಣಶಾಸ್ತ್ರಿಗಳಿಗೆ ದಕ್ಕಿದ್ದು ಸಂಘದ ಮುನ್ನಡೆಗೆ ಪುಷ್ಟಿ ಸಿಕ್ಕಂತಾಗಿದ್ದಲ್ಲದೆ ಹತ್ತಾರು ಯೋಜನೆಗಳಿಗೆ ದಾರಿ ಮಾಡಿಕೊಟ್ಟಿತು. ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ನಂತರ ಹುಟ್ಟಿಕೊಂಡ ಎಲ್ಲ ಸಂಘಟನೆಗಳಿಗೂ ಅದೇ ಮಾದರಿ ಹಾಗೂ ದಾರಿದೀಪವಾಯಿತು. ಪಂಡಿತ ಮಂಡಲಿಗಳು ಕೈಜೋಡಿಸಿ ಸಂಘಕ್ಕೆ ಭದ್ರ ಬುನಾದಿ ಹಾಕಿದರು.
ಸ್ವಾತಂತ್ರ್ಯ ಚಳುವಳಿ, ಇಂಗ್ಲಿಷ್ ಭಾಷೆಯ ವ್ಯಾಮೋಹ, ಕನ್ನಡ ಭಾಷೆಯ ಬಗ್ಗೆ ತಾತ್ಸಾರ ಮತ್ತು ಆರ್ಥಿಕ ಸಂಕಷ್ಟ – ಇವುಗಳ ನಡುವೆ ಸಂಘ ತಲೆಎತ್ತಿ ನಿಂತದ್ದೇ ಒಂದು ಸೋಜಿಗ. ಕನ್ನಡದ ಮಹನೀಯರುಗಳು ಭಿನ್ನ ಮಾತೃಭಾಷಿಕರು. ಆದರೆ ಇಂಗ್ಲಿಷ್ ಭಾಷೆಯಲ್ಲಿ ಅಪಾರ ನೈಪುಣ್ಯವುಳ್ಳವರು. ಇವರುಗಳಿಂದ ಕನ್ನಡ ಕಟ್ಟುವ ಕೆಲಸ ನಡೆದದ್ದು ಅಪೂರ್ವ ಸಾಧನೆ.
ಎ.ಆರ್. ಕೃಷ್ಣಶಾಸ್ತ್ರಿಗಳಿಂದ ಹಿಡಿದು ಜಿ.ಪಿ.ರಾಜರತ್ನಂ ವರೆಗೆ ಕರ್ಣಾಟಕ ಸಂಘದ ಎಲ್ಲ ಚಟುವಟಿಕೆಗಳು ನಿರ್ಭರದಿಂದ ಸಾಗಿದ್ದು ಈಗ ಇತಿಹಾಸ. ಟಿ.ಎಸ್. ವೆಂಕಣ್ಣಯ್ಯ, ವಿ.ಸೀತಾರಾಮಯ್ಯ, ಡಿ.ವಿ.ಗುಂಡಪ್ಪ, ಬಿ.ಎಂ.ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶಅಯ್ಯಂಗಾರ್, ಕೆ.ವಿ.ಪುಟ್ಟಪ್ಪ, ಎಂ.ವಿ.ಸೀತಾರಾಮಯ್ಯ, ಮುಂತಾದ ಘಟಾನುಘಟಿಗಳು ಕರ್ಣಾಟಕ ಸಂಘದ

ಆಧಾರ ಸ್ಥಂಭಗಳಾಗಿ ದುಡಿದು ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದು ಈಗ ನೆನಪು ಮಾತ್ರ. ಸೆಂಟ್ರಲ್‌ಕಾಲೇಜು ಕರ್ನಾಟಕ ಸಂಘವನ್ನು ಕುರಿತಂತೆ ಬಿ.ಜಿ.ಎಲ್ ಸ್ವಾಮಿ ಅವರ 'ಪಂಚಕಲಶಗೋಪುರ' ಕೃತಿಯೊಂದೇ ಸಂಘವನ್ನು ಕುರಿತಂತೆ ಲಭ್ಯವಿರುವ ಏಕೈಕ ಅನನ್ಯಕೃತಿ.

ಕರ್ನಾಟಕ ಸಂಘ ಇಟ್ಟ ದಿಟ್ಟ ಹೆಜ್ಜೆಗಳು, ಕೈಗೆತ್ತಿಕೊಂಡ ನಿರ್ಣಯಗಳು, ಹಾಕಿಕೊಂಡ ಯೋಜನೆಗಳು ಎಲ್ಲವನ್ನೂ ಒಂದು ಶತಮಾನದ ನಂತರದಲ್ಲಿ ಮೆಲುಕು ಹಾಕುವ ಪ್ರಯತ್ನವಿದು. ಸಂಘಟನೆಯ ಕುಡಿಗಳು ಎಲ್ಲಿ ಚಿಗುರೊಡೆದಿದೆ, ಅದರ ಬೇರುಗಳು ಮತ್ತೆಲ್ಲಿ ಕಾಣಿಸಿಕೊಂಡಿದೆ ಎಂಬುದನ್ನು ಅವಲೋಕಿಸುವ ಅವಶ್ಯಕತೆ ಮತ್ತು ಅಗತ್ಯತೆಗಳನ್ನು ಯುವ ಪೀಳಿಗೆಗೆ ತಲುಪಿಸುವ ನಿಮಿತ್ತ ಈ ಲೇಖನ. ಬೆಂಗಳೂರಿನ ಸೆಂಟ್ರಲ್‌ಕಾಲೇಜು ಕರ್ನಾಟಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿಗಳಿಗೆ ಒಂದು ನೂರು ತುಂಬಿದ್ದರೂ ಅವುಗಳ ಚಟುವಟಿಕೆಗಳು ಮಾಸದೆ, ಮಬ್ಬಾಗದೆ ಉಳಿದಿರುವುದು ಸಂಘಟಕರ ದೂರದೃಷ್ಟಿಗೆ ಹಿಡಿದ ಕನ್ನಡಿ.

**ಕೀ ವರ್ಡ್ಸ್:** ಸೆಂಟ್ರಲ್‌ಕಾಲೇಜು, ಸಂಘಟನೆ, ಎ.ಆರ್, ಕೃಷ್ಣಶಾಸ್ತ್ರಿ, ಪುಸ್ತಕ ಪ್ರಕಟಣೆ, ಡಿ.ವಿ.ಗುಂಡಪ್ಪ, ಕರ್ನಾಟಕ ಸಂಘ.

**ಪೀಠಿಕೆ:** 1890 ರಲ್ಲಿ ಶ್ರೀ ಆರ್. ಎಚ್.ದೇಶಪಾಂಡೆ ಅವರು ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ವನ್ನು ಸ್ಥಾಪಿಸಿದರು. ಕರ್ನಾಟಕದಲ್ಲಿ ಪ್ರಾರಂಭಗೊಂಡ ಮೊದಲ ಸಂಘ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.

ಆಗಿನ್ನೂ ಭಾರತ ಬ್ರಿಟಿಷ್ ಆಳ್ವಿಕೆಯಲ್ಲಿತ್ತು. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವ ಕಾರಣಕ್ಕಾಗಿ ಸಂಸ್ಥೆ ರೂಪುಗೊಂಡಿತು. ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಘ ಪ್ರಾಮುಖ್ಯತೆ ಪಡೆಯಿತು. ಹಲವು ಸಂಘಟನೆಗಳ ಉದಯಕ್ಕೆ ಪ್ರೇರಣೆ ನೀಡಿದ್ದಲ್ಲದೆ ಮಾರ್ಗದರ್ಶಿಯೂ ಆಯಿತು.

ಕನ್ನಡ ಭಾಷೆ, ಸಾಹಿತ್ಯಗಳ ಉತ್ತೇಜನ ಮತ್ತು ಪ್ರಚಾರಕ್ಕಾಗಿ 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡರೆ, ವಿದ್ಯಾರ್ಥಿಗಳಲ್ಲಿ ಜಾಗೃತಿ ಹಾಗೂ ಕನ್ನಡದ ಬೆಳವಣಿಗೆಗೆ ಪ್ರೋತ್ಸಾಹ ತುಂಬುವ ಕಾರಣಕ್ಕಾಗಿ 1918ರಲ್ಲಿ ಸೆಂಟ್ರಲ್‌ಕಾಲೇಜು ಕರ್ನಾಟಕ ಸಂಘವು ಸ್ಥಾಪನೆಗೊಂಡಿತು. ಬೆಂಗಳೂರಿನ ಅತ್ಯಂತ ಕ್ರಿಯಾಶೀಲ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವೇದಿಕೆಗಳಲ್ಲಿ ಈ ಎರಡೂ ಸಂಘಟನೆಗಳು ಪ್ರಮುಖವಾದವು. ಸೌಹಾರ್ದ ಭಾವವನ್ನು ಬೆಳೆಸುವುದು ಮತ್ತು ಪೋಷಿಸುವುದು ಈ ಸಂಸ್ಥೆಯ ಧ್ಯೇಯೋದ್ದೇಶ'ಗಳಲ್ಲೊಂದು. ಇವುಗಳು ಅಕಾಡೆಮಿಕ್ ವಿದ್ವಾಂಸರ ಕೂಟವೂ ಹೌದು, ಸಾಮಾನ್ಯಜನರ ಪಾಲಿನ ಸಾಂಸ್ಕೃತಿಕ ಕೇಂದ್ರವೂ ಹೌದು.

ಧಾರವಾಡದ ವಿದ್ಯಾವರ್ಧಕ ಸಂಘ (1890–2018 – 128 ವರ್ಷಗಳು), ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು (1915–2018 – 103 ವರ್ಷಗಳು) ಮತ್ತು ಸೆಂಟ್ರಲ್‌ಕಾಲೇಜು ಕರ್ನಾಟಕ ಸಂಘ (1918–2018– 100ವರ್ಷಗಳು) ಶತಮಾನ ಪೂರೈಸಿಕೊಂಡ ಸಂಘಟನೆಗಳು. ರಾ.ದೇಶಪಾಂಡೆ, ಎ.ಆರ್. ಕೃಷ್ಣಶಾಸ್ತ್ರಿ, ಎಚ್.ವಿ.ನಂಜುಂಡಯ್ಯ ಇವರುಗಳು ಇಟ್ಟ ದಿಟ್ಟ ಹೆಜ್ಜೆಯ ಫಲ ಸಂಘಟನೆಯ ಉದಯಕ್ಕೆ ಕಾರಣವಾಯಿತು. ಶತಮಾನ ಪೂರೈಸಿದ ಈ ಮೂರು ಸಂಘಟನೆಗಳಲ್ಲಿ ಉಳಿದಿರುವುದು ಹಾಗೂ ಚಾಲ್ತಿಯಲ್ಲಿರುವುದು ಎರಡು ಮಾತ್ರ.. ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ ನೆನಪು ಮಾತ್ರ.

**ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಅತಿರಥರು**


ಎ.ಆರ್.ಕೃಷ್ಣಶಾಸ್ತ್ರಿ


ಬೆಳ್ಳಾವೆ ವಂಕಟರಮಣಪ್ಪ


ಟಿ.ಎಸ್.ವೆಂಕಣ್ಣಯ್ಯ


ಬಿ.ಎಂ. ಶ್ರೀಕಂಠಯ್ಯ


ವಿ.ಸೀತಾರಾಮಯ್ಯ


ಸೆಂಟ್ರಲ್ ಕಾಲೇಜು

**ಕರ್ನಾಟಕ ಸಂಘದ ಪಂಚಕಲಶಗೋಪುರಗಳು**

**ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ– ಶತಮಾನದ ಸ್ಮರಣೆ (1918–2018)**

ಬೆಂಗಳೂರಿನ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘವನ್ನು ಪರಿಚಯಿಸಲು ಇರುವ ಎರಡು ಗಟ್ಟಿ ಆಕರಗಳೆಂದರೆ, (1) ಡಾ.ಬಿ.ಜಿ.ಎಲ್ ಸ್ವಾಮಿ ಅವರ 'ಪಂಚಕಲಶಗೋಪುರ' (2) ಜಿ.ಪಿ.ರಾಜರತ್ನಂ ಅವರು ಸೆಂಟ್ರಲ್ ಕಾಲೇಜಿಗೆ ಒಂದು ನೂರು ತುಂಬಿದ ಸಂದರ್ಭದಲ್ಲಿ ಬರೆದ 'ನಮ್ಮ ತಾಯಿಗೆ ನೂರು ವರ್ಷ' ದ ಸಂತೋಷ ಸಂಚಿಕೆ.

ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ನಂತರ ಹುಟ್ಟಿಕೊಂಡ

ಕನ್ನಡದ ಎಲ್ಲ ಸಂಘಟನೆಗಳಿಗೂ ಈ ಸಂಘವೇ ಮಾದರಿ ಹಾಗೂ ಆದರ್ಶ. ಕನ್ನಡ ಸಾಹಿತ್ಯ–ಸಾಂಸ್ಕೃತಿಕ ಪರಂಪರೆಯ ಬೆಳವಣಿಗೆಯಲ್ಲಿ ಸಂಘ ಒಂದು ಮಹತ್ವದ ಹೆಜ್ಜೆ ಗುರುತು. ಒಂದು ಪರಂಪರೆಯನ್ನು ಹುಟ್ಟು ಹಾಕಿದ ಕೀರ್ತಿಗೆ ಭಾಜನವಾದ ಸಂಘಟನೆಯು, 1969 ರಲ್ಲಿ 'ಚಿನ್ನದ ಗರಿ' ಕವನ ಸಂಕಲನದ ಪ್ರಕಟಣೆಯೊಂದಿಗೆ ಸ್ಥಗಿತಗೊಂಡಿತು. ಹೀಗಾಗಿ ಕರ್ಣಾಟಕ ಸಂಘ ದೀರ್ಘಾಯುವಲ್ಲದಿದ್ದರೂ ಅದರ ಬೇರುಗಳು ಇಂದಿಗೂ ಇತರ ಸಂಘಟನೆಗಳಲ್ಲಿ ಶಾಶ್ವತವಾಗಿ ಉಳಿದಿವೆ. 'ಈಗ ಸೆಂಟ್ರಲ್ ಕಾಲೇಜ್ ನಲ್ಲಿ ಕರ್ಣಾಟಕ ಸಂಘವೂ ಇಲ್ಲ, ಅದನ್ನು ಕಟ್ಟ ಬೆಳೆಸಿದ ವ್ಯಕ್ತಿಗಳೂ ಇಲ್ಲ, ನೆನಪು ಮಾತ್ರ ಉಳಿದಿದೆ.' [1] ಸೆಂಟ್ರಲ್ ಕಾಲೇಜಿನಲ್ಲಿದ್ದ 'ಕನ್ನಡ ಇಲಾಖೆ' ಈಗ ಬೆಂಗಳೂರು ವಿಶ್ವವಿದ್ಯಾನಿಲಯದ ಹೊಸ ಆವರಣ 'ಜ್ಞಾನಭಾರತಿ' ಯಲ್ಲಿ 'ಕನ್ನಡ ಅಧ್ಯಯನ ಕೇಂದ್ರ' ವಾಗಿ ರೂಪುಗೊಂಡಿದ್ದರೆ, ಕರ್ಣಾಟಕ ಸಂಘ, 'ಕನ್ನಡ ಅಧ್ಯಯನ ಕೇಂದ್ರದ ಕರ್ಣಾಟಕ ಸಂಘ' ಎಂಬ ಅಭಿದಾನ ಪಡೆದು ನಿಂತು, ನಿಂತು ನಡೆದು ಕೆಲವೊಮ್ಮೆ ಬದಿಗೆ ಸರಿದು, ಇತ್ತೀಚಿನ ವರ್ಷಗಳಲ್ಲಿ ಕಣ್ಮರೆಯಾಗಿದೆ. ಸೆಂಟ್ರಲ್ ಕಾಲೇಜಿನಲ್ಲಿ ಮೈತಾಳಿದ್ದ ಪ್ರಸಿದ್ಧ ಪತ್ರಿಕೆ 'ಪ್ರಬುದ್ಧ ಕರ್ಣಾಟಕ' ಮಾತ್ರ ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯಾಗಿ ಇಂದಿಗೂ ಅಸ್ತಿತ್ವದಲ್ಲಿದೆ.




ಕರ್ಣಾಟಕ ಸಂಘವು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾರಂಭಗೊಂಡು, ಪ್ರಬುದ್ಧಕರ್ಣಾಟಕ ಪತ್ರಿಕೆ ಮೂಲಕ ಮೈಸೂರು ವಿಶ್ವವಿದ್ಯಾಲಯ ಪ್ರವೇಶಿಸಿ, ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿಂತು ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿಯಲ್ಲಿ ಕುಡಿಯೊಡೆದು ಮುಂದುವರೆಯುತ್ತಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ತಲೆ ಎತ್ತಿದ ಕರ್ಣಾಟಕ ಸಂಘ (1918) ಕ್ಕೆ ಯಾವ ಮಾದರಿಯಾಗಲೀ ಯಾವ ಪ್ರೋತ್ಸಾಹವಾಗಲಿ ದಕ್ಕದಿದ್ದಾಗಲೂ ಮಹನೀಯರುಗಳು ಹಗಲಿರುಳು ಸ್ವ ಇಚ್ಛೆಯಿಂದ ತಮ್ಮ ಬದುಕನ್ನೇ ಮೀಸಲಿಟ್ಟು ಜೀವತುಂಬಲು ಪಟ್ಟ ಪ್ರಯತ್ನ ಅಪೂರ್ವ ದಾಖಲೆ. ಆದಾಗ್ಯೂ ಅದು ಕಂಡ ಏಳು ಬೀಳುಗಳನ್ನು ಗಮನಿಸಿದಾಗ ಸಂಘ ಮುಂದುವರೆದುಕೊಂಡು ನಿಂತಿದ್ದೇ ಒಂದು ಪವಾಡ.

1. ಚಿ.ಶ್ರೀನಿವಾಸರಾಜು, ಆಗಾಗ, ಪರಿಚಾರಿಕೆಯ ನಡುವಿನ ಮಾತು–ಬರಹ, ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘ ಮತ್ತು ರಾಜರತ್ನಂ, ಪುಟ–510 (2009)

ಪ್ರಾದೇಶಿಕ ಭಾಷೆಯೊಂದನ್ನು ಶೈಕ್ಷಣಿಕ ವಲಯದ ತೆಕ್ಕೆಗೆ ತಂದುಕೊಳ್ಳುವುದರಿಂದ ಹಿಡಿದು ಅದರಲ್ಲಿರುವ ತಿರುಳು ಯಾವ ಭಾಷೆಗೂ ಕಡಿಮೆಯಲ್ಲದ್ದು ಎಂಬುದನ್ನು ಗುರುತಿಸಿ ಪ್ರಮಾಣಿಸಿ ತೋರಿಸುವವರೆಗೂ ಕಾರ್ಯ ನಿರ್ವಹಿಸಬೇಕಿತ್ತು ಹೆಜ್ಜೆ ಹೆಜ್ಜೆಗೂ ಸವಾಲುಗಳೇ. ಏಕೆಂದರೆ 'ಕನ್ನಡ ಮಾತನಾಡಿದರೆ, ಕೇಳಿದರೆ, ಬರೆದರೆ, ಓದಿದರೆ, ಕೀಳು ಎಂಬ ಮನೋಭಾವ ಪ್ರಚಲಿತವಾಗಿದ್ದ ಕಾಲದಲ್ಲಿ ಸೆಂಟ್ರಲ್ ಕಾಲೇಜು 'ಕರ್ಣಾಟಕ ಸಂಘ' ಜನ್ಮ ತಾಳಿತು'[2] ಎಂಬುವಲ್ಲಿ ಭಾಷೆಯ ಪರಿಸ್ಥಿತಿ ಹಾಗೂ ಸ್ಥಿತಿಗತಿಗಳ ಅರಿವು ಮನದಟ್ಟಾಗುತ್ತದೆ. ಅಂತೆಯೇ ಟಿ. ಎಸ್. ವೆಂಕಣ್ಣಯ್ಯನವರು 1914 ರಲ್ಲಿ ಖಾಸಗಿ ವಿದ್ಯಾರ್ಥಿಯಾಗಿ, ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದ ಸಮಾಚಾರವನ್ನು ಪರಿಚಯಿಸುತ್ತ ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರು 'ಆಗಿನ ದಿನಗಳಲ್ಲಿ ಕನ್ನಡ ಎಂದರೇ ತಾತ್ಸಾರ, ಕನ್ನಡದಲ್ಲಿ ಎಂ.ಎ.ಪರೀಕ್ಷೆ ಮಾಡುವುದೆಂದರೆ ಹಾಸ್ಯಕ್ಕೆ ವಸ್ತು' ಎಂದಿದ್ದಾರೆ. ಸಂಸ್ಕೃತದ ಹಿಡಿತದಿಂದ ಬಿಡಿಸಿಕೊಳ್ಳುವುದು ಒಂದೆಡೆಯಾದರೆ, ಇಂಗ್ಲಿಷ್ ವ್ಯಾಮೋಹದಿಂದ ದೂರ ಸರಿಯುವುದಕ್ಕೆ ಇದ್ದ ಸಂಕೋಚ ಮತ್ತೊಂದೆಡೆ. 1912 ರಲ್ಲಿ ಮೈಸೂರಿನಲ್ಲಿ ನಡೆದ ಸಾಹಿತ್ಯ ಸಭೆಯೊಂದರಲ್ಲಿ ಕನ್ನಡದ ಮುನ್ನಡೆ ಬಗ್ಗೆ ಬಿ.ಎಂ.ಶ್ರೀ ಅವರು ಇಂಗ್ಲಿಷ್‌ನಲ್ಲಿ ಭಾಷಣ ಮಾಡಿ ಹೊಸಗನ್ನಡದ ಮೊಳಗನ್ನು ಮೂಡಿಸಿದ್ದು ಚಾರಿತ್ರಿಕ ದಾಖಲೆ. ಹಳೆಯ ಸಂಸ್ಕೃತ ಪಂಡಿತ ಮಂಡಲಿಗಳು ಹಾಗೂ ಜಡ ವಿದ್ವಾಂಸರುಗಳೊಡನೆ ನಡೆಯಬಹುದಾದ ಘರ್ಷಣೆಗಳಿಗೆ ಕೂಡ ಕನ್ನಡ ಪಂಡಿತರುಗಳು ತಯಾರಿ ನಡೆಸಿಕೊಳ್ಳಬೇಕಾಗಿದ್ದ ಕಾಲವದು. ಈ ಸಭೆ ಮುಂದಿನ ಸಾಹಿತ್ಯಕ ಚಟುವಟಿಕೆಗಳಿಗೆ ನಾಂದಿಯಾಯಿತು ಎನ್ನುತ್ತಾರೆ ನೀಲತ್ತಹಳ್ಳಿ ಕಸ್ತೂರಿ. ಇಂತಹ ಪರಿಸ್ಥಿತಿಯಲ್ಲೂ ಕರ್ಣಾಟಕ ಸಂಘವನ್ನು ಸ್ಥಾಪಿಸಿ ಮೆಲ್ಲಗೆ ಗರಿಗೆದರುವಂತೆ ಮಾಡಿದ ಯಶಸ್ಸು ಟಿ. ಎಸ್. ವೆಂಕಣ್ಣಯ್ಯನವರಿಗೆ ಸಲ್ಲುತ್ತದೆ.

ಇಂಗ್ಲಿಷ್ ಶಿಕ್ಷಣದ ಜೊತೆಜೊತೆಯಲ್ಲೇ ಕನ್ನಡದ ಶಿಕ್ಷಣವೂ ಸಾಗುವಂತೆ ಏರ್ಪಾಟು ಮಾಡಿ ಅದಕ್ಕೆ ತಕ್ಕ ಸಿದ್ಧತೆಗಳನ್ನು ರೂಪಿಸಲು ಟೊಂಕ ಕಟ್ಟಿ ನಿಂತವರ ಸಂಖ್ಯೆಯೂ ಅಂದು ಬೆರಳೆಣಿಕೆಯಷ್ಟೆ ಇದ್ದದ್ದು ನಗ್ನಸತ್ಯ. ಒಂದು ನೂರು ವರ್ಷಗಳ ನಂತರವೂ, ಕನ್ನಡಕ್ಕೆ ಎಂಟು ಜ್ಞಾನಪೀಠಗಳು ದೊರೆತ ಮೇಲೆಯೂ ಪರಿಸ್ಥಿತಿ ಹಾಗೆಯೇ ಉಳಿದಿದೆ ಎಂಬುದು ವಿಪರ್ಯಾಸ. ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ರುವಾರಿಗಳು ರೂಪಿಸಿಕೊಟ್ಟ ನಕಾಶೆ, ಸಾಗಬೇಕಾದ ಹಾದಿ, ಪುಸ್ತಕ ಪ್ರಕಾಶನದ ಮಹತ್ವ ಮತ್ತು ಲೇಖನ, ಭಾಷಣಗಳ ಮೂಲಕ ಮೂಡಿಸಿದ ಜನಜಾಗೃತಿ ಅನನ್ಯವಾದುದು.

**1. ಪಂಚಕಲಶಗೋಪುರ–ಬಿ.ಜಿ.ಎಲ್ ಸ್ವಾಮಿ**

ಇದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವನ್ನೂ ಅದರ ಇಬ್ಬರು ಅಧ್ಯಕ್ಷರು ಮೂವರು ಉಪಾಧ್ಯಕ್ಷರುಗಳನ್ನೂ ಕುರಿತ ಚಿತ್ರಶಾಲೆ– ಎಂದು ಪುಸ್ತಕದ ಪೂರ್ವಕಥೆಯನ್ನು ಬರೆದ ಜಿ.ಪಿ.ರಾಜರತ್ನಂ ಹೇಳಿಕೆ ಕೊಟ್ಟು ಪುಸ್ತಕದಲ್ಲಿನ ರೇಖಾಚಿತ್ರಗಳನ್ನೂ ಬರೆದ ಬಿ.ಜಿ.ಎಲ್ ಸ್ವಾಮಿ ಅವರನ್ನು ಶ್ಲಾಘಿಸಿದ್ದಾರೆ. ಅಂತೆಯೇ ಮುಂದುವರೆದು 'ಈ ಕೃತಿ ಕೇವಲ ಕಲ್ಪನೆಯ ಫಲವಲ್ಲ. ವಾಸ್ತವವಾಗಿ ನಡೆದ ಘಟನೆಗಳನ್ನು ಸ್ವಾರಸ್ಯವಾಗಿ ನಿರೂಪಿಸುವ ಯಥಾರ್ಥಕೃತಿ' ಎಂದು ಬಣ್ಣಿಸಿ

ಪ್ರಕಟಣೆಗೆ ಸಂತೋಷದಿಂದ ಮುಂದಾಗಿದ್ದಾರೆ
ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ, ಅಧ್ಯಾಪಕರ ಕೊಠಡಿ ಮತ್ತು ತರಗತಿ ಎಲ್ಲ ಒಂದು ಸಣ್ಣ ಗೂಡಿನಂಥ ಕೊಠಡಿಯಲ್ಲೇ. ಯಾವುದೇ ಅನುಕೂಲಗಳಿಲ್ಲದ ಕೆಟ್ಟ ವಾಸನೆಯಿಂದ ಕತ್ತಲೆ ತುಂಬಿರುವ ನರಕದ ಗೂಡು ಅದಾಗಿತ್ತೆಂಬುದು ಪುಸ್ತಕದ ಮೊದಲ ಮೂರು ಅಧ್ಯಾಯಗಳಿಂದ (1. ನಮ್ಮ ಕರ್ನಾಟಕ ಸಂಘ, 2. ಸಂಘದ ಸುತ್ತುಮುತ್ತು, 3. ಸಂಘದ ದೇಹಸ್ವರೂಪ) ಪರಿಚಯವಾಗುತ್ತದೆ. ಹರಕಲು ಮುರುಕು ತೇಪೆ ಹಚ್ಚಿದ ಛಿದ್ರ ಗೋಡೆಯ ಕೊಠಡಿಯಲ್ಲೇ ಮಹತ್ತರ ನಿರ್ಣಯಗಳು, ಕಾರ್ಯಸೂಚಿ ಸಭೆಗಳು, ಚರ್ಚೆ, ಪ್ರಬುದ್ಧ ಕರ್ನಾಟಕ ಪತ್ರಿಕೆಯ ಒಪ್ಪ ಓರಣ ಇತ್ಯಾದಿಗಳೆಲ್ಲ ನಡೆಯಬೇಕಿತ್ತು.

**2. ಚಿ.ಶ್ರೀನಿವಾಸರಾಜು, ಆಗಾಗ, ಪರಿಚಾರಿಕೆಯ ನಡುವಿನ ಮಾತು–ಬರಹ, ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘ ಮತ್ತು ರಾಜರತ್ನಂ, ಪುಟ–511 (2009)**

ಭಾಷಣಗಳನ್ನು ಏರ್ಪಡಿಸಲು ಭವನಕ್ಕಾಗಿ ತಿಕ್ಕಾಟ, ಘರ್ಷಣೆಗಳೂ ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಅಂದಿನ ಅಧ್ಯಾಪಕರ ಅಸಹಕಾರ. ಅಸಹನೆ, ಮತ್ತು ಅವಹೇಳನಗಳನ್ನು ಕುರಿತು ಬಿ.ಜಿ.ಎಲ್ ಸ್ವಾಮಿ ಅವರ ಮನಸ್ಸಿನ ಕಹಿ ಹೀಗೆ ವ್ಯಕ್ತವಾಗಿದೆ. – "ಇವರಿಗೂ ಕರ್ನಾಟಕ ಸಂಘಕ್ಕೂ ಅದೇಕೋ ಋಣಾನುಬಂಧ ಸರಿಯಾಗಿರಲಿಲ್ಲ. ಸಂಘದ ಕೆಲಸ ಕಾರ್ಯಗಳನ್ನು ಆಕ್ಷೇಪಣೆ ಮಾಡುವುದು, 'ಅದೇನಂತೆ ಮಹಾ!'ಎನ್ನುವುದು, ಇಲ್ಲವೆ ಅಲ್ಲಗಳೆಯುವುದು, ಇಲ್ಲವೇ ಗೇಲಿ ಮಾಡುವುದು ಇವರ ವಾಡಿಕೆಯಾಗಿತ್ತು. ಒಂದೆರಡು ಸಂದರ್ಭಗಳಲ್ಲಿ ಸಂಘದ ಕಾರ್ಯಗಳನ್ನು ಎದುರಿಸುವಂತೆ ಕೆಲವು ಹುಡುಗರನ್ನು ಎತ್ತಿಕಟ್ಟುವುದಕ್ಕೆ ಪ್ರಯತ್ನಿಸಿ ವಿಫಲರಾಗಿದ್ದರು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರಲ್ಲಿ ನಯವನ್ನಾಗಲಿ ಹಿಡಿತವನ್ನಾಗಲಿ ತೋರಿಸುತ್ತಿದ್ದವರಲ್ಲ. ಇವರ ಪಾಠ ಸಮಯಗಳಲ್ಲಿ ನಾನು ವಿದ್ಯಾರ್ಥಿಯಾಗಿ ಕುಳಿತಿದ್ದಾಗ ಕೂಡ ಇವರ ಗೇಲಿಗೂ ತಾತ್ಸರಾಕ್ಕೂ ಪಶುವಾಗುತ್ತಿದ್ದೆ. ಇದಕ್ಕೆ ಕಾರಣವನ್ನು ಬಹುದೂರ ಹುಡುಕಿಕೊಂಡು ಹೋಗಬೇಕಾಗಿರಲಿಲ್ಲ. ತಮಗೆ ಸಕಲ ಸೌಕರ್ಯವಿದ್ದೂ ಮಾಡಲಾಗದಿದ್ದ ಕೆಲಸಗಳನ್ನು ಏನೂ ಇಲ್ಲದ ಕರ್ನಾಟಕ ಸಂಘ ಸರಾಗವಾಗಿ ನಡೆಸಿಕೊಂಡು ಹೋಗುತ್ತಿದೆಯಲ್ಲ ಎಂಬ ಹೊಟ್ಟೆಕಿಚ್ಚು ಇವರನ್ನು ದಹಿಸುತ್ತಿತ್ತು"[3] ಇಂತಹ ಘಟನೆಗಳಿಂದಾಗಿ ಸಂಘ ಮುನ್ನಡೆ ಸಾಧಿಸಲಾಗದೆ ಎಡವುತ್ತಿತ್ತು.

**3. ನಮ್ಮ ತಾಯಿಗೆ ನೂರು ವರ್ಷ, ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ – ಜಿ.ಪಿ.ರಾಜರತ್ನಂ**

ಸಂಘ ಆರಂಭಗೊಂಡ ಪ್ರಾರಂಭದ ದಿನಗಳಲ್ಲಿ ಕರ್ನಾಟಕ ಸಂಘಕ್ಕಿದ್ದ ಧ್ಯೇಯ, ಉದ್ದೇಶ, ವ್ಯಾಪ್ತಿಗಳನ್ನು ಪರಿಚಯಿಸುತ್ತ ಸಾಹಿತ್ಯಕ ಚಟುವಟಿಕೆಗಳು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕವರ್ಗಕ್ಕೆ ಮಾತ್ರ ಸೀಮಿತವಾಗಿರದಂತೆ ಹೊರಗಿನವರನ್ನೂ ಒಳಗು ಮಾಡಿಕೊಳ್ಳುವ ಮೂಲಕ ಅಖಿಲ ಕರ್ನಾಟಕತ್ವವನ್ನು ಬೆಳೆಸಿಕೊಂಡದ್ದು ಸಂಘ ಇಟ್ಟ ದಿಟ್ಟಹೆಜ್ಜೆ ಎಂಬುದು ಜಿ.ಪಿ.ರಾಜರತ್ನಂ ಅವರ ಅಭಿಮತ.

ವಿದ್ಯಾರ್ಥಿಗಳಿಗೆ ಭಾಷಣ, ವಿದ್ಯಾರ್ಥಿಗಳಿಂದ ಭಾಷಣ, ಚರ್ಚೆ, ನಾಟಕ, ಗಮಕವಾಚನ, ಹಿರಿಯ ಸಾಹಿತಿಗಳಿಗೆ ಗೌರವ ಸಮರ್ಪಣೆ, ವಿವಿಧ ಸ್ಪರ್ಧೆಗಳು, ವಿಜೇತರಿಗೆ ಪಾರಿತೋಷಕ, ಚಿನ್ನದ ಪದಕ ತೊಡಿಸುವುದು, ವಿದ್ಯಾರ್ಥಿ ವೇತನ, ಕಾವ್ಯ ವಾಚನ– ಮುಂತಾದ ಚಟುವಟಿಕೆಗಳಿಗೆ ನಿಲ್ಲದೆ ತನ್ನ ಕಾರ್ಯ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಪುಸ್ತಕ ಪ್ರಕಟಣೆಯ ಕಡೆಗೆ ಹೊರಳಿದ್ದು ಸಂಘದ ಸದಸ್ಯರುಗಳ ದೂರದೃಷ್ಟಿಗೆ ಸಾಕ್ಷಿ ಎಂಬುದಕ್ಕೆ, 1918 ರಲ್ಲಿ ಸ್ಥಾಪಿತವಾದ ಸಂಘ ಒಂದು ವರ್ಷದ ನಂತರದಲ್ಲೇ ಅಂದರೆ 1919 ರಲ್ಲಿ ಪ್ರಬುದ್ಧ ಕರ್ನಾಟಕ ಸಾಹಿತ್ಯ ಪತ್ರಿಕೆ ಆರಂಭಿಸಿದ್ದು. ಹೊಸ ಪ್ರಯೋಗಗಳ, ವಿನೂತನ ಚಿಂತನೆಗಳ ಕಾರ್ಯಗಾರದಂತೆ ಕರ್ನಾಟಕ ಸಂಘ ಬೆಳವಣಿಗೆ ಕಾಣುತ್ತಿದ್ದುದು ಹಿರಿಯರೆಲ್ಲರ ಹಿಗ್ಗಿಗೆ ಕಾರಣವಾಗಿತ್ತು.

ಶ್ರೀಯುತರಾದ ಎ.ಆರ್.ಕೃಷ್ಣಶಾಸ್ತ್ರಿಗಳು, ಬೆಳ್ಳಾವೆ ವೆಂಕಟನಾರಣಪ್ಪನವರು, ಟಿ.ಎಸ್. ವೆಂಕಣ್ಣಯ್ಯನವರು, ಬಿ.ಎಂ. ಶ್ರೀಕಂಠಯ್ಯ ಮೊದಲಾದವರು ಸಂಘಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟು ಮುನ್ನಡೆಸುತ್ತಿದ್ದ ಸಂದರ್ಭದಲ್ಲೇ ಅಷ್ಟೇ ಸಮರ್ಥರಾದ ಡಿ.ವಿ. ಗುಂಡಪ್ಪನವರು ಸಂಘಕ್ಕೆ ಸೇರ್ಪಡೆಯಾದದ್ದು ಸಂಘದ ಓಟಕ್ಕೆ ಕಾರಣವಾಯಿತು. ಮೂಲತ: ಡಿ.ವಿ.ಗುಂಡಪ್ಪನವರು ಸೆಂಟ್ರಲ್ ಕಾಲೇಜಿನ ಹಳೆಯ ವಿದ್ಯಾರ್ಥಿಯೂ ಅಲ್ಲ, ಸದಸ್ಯರೂ ಅಲ್ಲ, ಆದಾಗ್ಯೂ ಅವರ ಸಂಪರ್ಕದಿಂದಾಗಿ, ಆಸಕ್ತಿಯಿಂದಾಗಿ ಸಂಘದ ಚಟುವಟಿಕೆಗಳು ಮತ್ತಷ್ಟು ಕ್ರಿಯಾಶೀಲವಾಯಿತು. ಇವರ 'ವಸಂತ ಕುಸುಮಾಂಜಲಿ', 'ನಿವೇದನ' ಕವನ ಸಂಗ್ರಹಗಳು ಸಂಘದ ಪ್ರಕಟಣೆಗಳಿಗೆ ಗೌರವವನ್ನು ತಂದುಕೊಟ್ಟದ್ದೇ ಅಲ್ಲದೆ ಸಂಘ ಬಲವಾಗಿ ಬೇರೂರಲು ನಾಂದಿ ಹಾಡಿತು. ಅವರು ರಚಿಸಿದ 'ವನಸುಮದೊಳೆನ್ನ ಜೀವನವು ವಿಕಸಿಸುವಂತೆ......' ಪದ್ಯ ಸಂಘದ ಅಧಿಕೃತ ಪ್ರಾರ್ಥನಾ ಪದ್ಯವಾಗಿ ನಿಂತಿತು. ಕನ್ನಡದ ಒಂದೊಂದು ನುಡಿಯೂ ಕಿಡಿಯಾಗಬೇಕು, ಸಿಡಿಲಾಗಬೇಕು, ನಕ್ಷತ್ರವಾಗಬೇಕು, ಅಮೃತಬಿಂದುವಾಗಬೇಕು ಎಂಬ ಆಕಾಂಕ್ಷೆ ಹೊತ್ತವರು ಡಿ.ವಿ.ಗುಂಡಪ್ಪನವರು.

3. ಡಾ. ಬಿ.ಜಿ.ಎಲ್.ಸ್ವಾಮಿ, ಪಂಚಕಲಶಗೋಪುರ, ಕರ್ನಾಟಕ ಸಂಘ, ಸೆಂಟ್ರಲ್ ಕಾಲೆಜ್, ಬೆಂಗಳೂರು, ಪುಟ–35 (1964)

ಇವರ ಒಡನಾಟ ಸಲಹೆ ಸಹಕಾರಗಳು ಹಾಗೂ ಸಾಹಿತ್ಯಾಭಿರುಚಿಯಿಂದಾಗಿ ಗುಂಡಪ್ಪನವರು ಕ್ರಮೇಣ ಸಂಘದ ಅಂಗವೇ ಆಗಿಬಿಟ್ಟರು ಮುಂದೆ ಸೆಂಟ್ರಲ್ ಕಾಲೇಜಿಗೆ ಅಧ್ಯಾಪಕರಾಗಿ ಬಂದ ವಿ.ಸೀತಾರಾಮಯ್ಯನವರಿಂದಾಗಿ ಸಂಘ ಮತ್ತಷ್ಟು ಮುನ್ನಡೆ ಸಾಧಿಸಲು ಕಾರಣವಾಯಿತು. ಕರ್ನಾಟಕ ಸಂಘದ ಪ್ರಬುದ್ಧಕರ್ನಾಟಕ ಇವರೆಲ್ಲರಿಂದಾಗಿ ಮೇಲ್ಮೆ ಹಾಗೂ ಯಶಸ್ಸು ಸಾಧಿಸಿದ್ದು ಚಾರಿತ್ರಿಕ ದಾಖಲೆ.

ಸೆಂಟ್ರಲ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಆದರ್ಶ ಗುರುಗಳ ಗರಡಿಯಲ್ಲಿ ಬೆಳೆದವರು. ಹಿರಿಯರು ತೋರಿದ ಪ್ರಶಸ್ತ ಹಾದಿಯಲ್ಲಿ ನಡೆದು ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಮಾದರಿಯಾದರು. ವಿದ್ಯಾರ್ಥಿ ಸಮೂಹವನ್ನು ಕಟ್ಟಿ, ಸಾಹಿತ್ಯಾಭಿರುಚಿಯನ್ನು ಹುಟ್ಟು ಹಾಕಿ, ಒಂದು ಪರಂಪರೆಯನ್ನು ಸೃಷ್ಟಿಮಾಡಿದ ಯಶಸ್ಸಿಗೆ, ಕರ್ನಾಟಕ ಸಂಘ ಕಾರಣವಾಗಿದೆ. 1939 ರಿಂದ 1952 ರವರೆಗೂ ಪುಸ್ತಕ ಪ್ರಕಟಣೆ ಮತ್ತು ಕರ್ನಾಟಕ ಸಂಘದ ಚಟುವಟಿಕೆಗಳು ಸ್ಥಗಿತಗೊಳ್ಳಲು ಮಹಾತ್ಮಗಾಂಧಿ ಅವರ ರಾಷ್ಟ್ರೀಯ ಅಂದೋಲನ ಕಾರಣವಾಗಿತ್ತು. 1952 ರಲ್ಲಿ ಸಂಘದ ಕೆಲಸ ಕಾರ್ಯಗಳು ಡಾ.ಜಿ.ಪಿ.ರಾಜರತ್ನಂ ಅವರ ಆಶ್ರಯದಲ್ಲಿ ಮುನ್ನಡೆಯಲಾಗಿ ಮರು ಹುಟ್ಟು ಹಾಗೂ ಮರು ಚೈತನ್ಯವನ್ನು ಪಡೆಯಿತು. ಇಂದಿನ–ಹಿಂದಿನ ತಲೆಮಾರಿನ ಪ್ರಸಿದ್ಧ ಕವಿಗಳು, ವಿಮರ್ಶಕರು, ಜಿ.ಪಿ.ರಾಜರತ್ನಂ ಅವರ ಪ್ರೋತ್ಸಾಹದಿಂದಲೇ ಬೆಳೆದು ಬಂದವರು. 1968 ರಲ್ಲಿ ಸಂಸ್ಥೆ ಚಿನ್ನದ ಹಬ್ಬವನ್ನು ಆಚರಿಸಿದೆ.

ಕರ್ನಾಟಕ ಸಂಘದ 'ಪ್ರಬುದ್ಧ ಕರ್ನಾಟಕ' – 1919–1931
ಮೈಸೂರು ವಿಶ್ವವಿದ್ಯಾಲಯದ ವಶಕ್ಕೆ ಬಂದ ವರ್ಷ–1932




ಪ್ರಬುದ್ಧ ಕರ್ಣಾಟಕ ಟಿ.ಎಸ್. ವೆಂಕಣ್ಣಯ್ಯನವರ ಕನಸಿನ ಕೂಸು. ಒಂದು ವರ್ಷದ ಅವಧಿಯೊಳಗೆ ತಮ್ಮ ಕನಸನ್ನು ಸಾಕಾರಗೊಳಿಸಿಕೊಂಡು ಯಶಸ್ವಿಯಾದರು. ಪ್ರಬುದ್ಧಕರ್ಣಾಟಕವೆಂಬ ಪ್ರೌಢ ಸಾಹಿತ್ಯ ಸಂಚಿಕೆಯನ್ನು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದಲ್ಲಿ ಸ್ಥಾಪಿಸಿದವರೂ ಅವರೆ, ಅದರ ಸಂಪಾದಕರೂ ಅವರೆ. ಆರಂಭದ ದಿನಗಳಲ್ಲೇ ಪತ್ರಿಕೆ ಅದ್ಭುತ ಯಶಸ್ಸು ಸಾಧಿಸಿದ್ದು ಅದರ ಹೆಗ್ಗಳಿಕೆ. ಇವರಂತೆಯೇ ಈ ಪತ್ರಿಕೆಯ ಹೊಣೆ ಹೊತ್ತವರು ಹಲವು ಪ್ರತಿಭಾನ್ವಿತ ಬರಹಗಾರರು. ಹೀಗೆ ಹಲವು ಎತ್ತರದ ವ್ಯಕ್ತಿಗಳ ಪರಿಶ್ರಮದಿಂದಾಗಿ ನೂರು ವರ್ಷಗಳ ನಂತರವೂ ಪತ್ರಿಕೆ ಜೀವಂತಿಕೆಯನ್ನು ಉಳಿಸಿಕೊಂಡಿರುವುದು ಗಮನಾರ್ಹ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಮರೆಯಲಾಗದ ಕೊಡುಗೆ ನೀಡಿರುವ, ಕನ್ನಡದ ಮುನ್ನಡೆಗೆ ಕಾರಣವಾಗಿರುವ ಹಾಗೂ ನೂರಾರು ತರುಣ ಲೇಖಕರನ್ನು ಶ್ರೇಷ್ಠ ಸಾಹಿತಿಗಳನ್ನಾಗಿ ಬೆಳೆಯಿಸುತ್ತ ಬಂದಿರುವ "ಪ್ರಬುದ್ಧ ಕರ್ಣಾಟಕ" ತ್ರೈಮಾಸಿಕ ಪತ್ರಿಕೆ ಎಲ್ಲ ಕನ್ನಡ ಪತ್ರಿಕೆಗಳಿಗೂ ಮೇಲುಪಂಕ್ತಿ. ಹೊಸಗನ್ನಡದಲ್ಲಿ ಮಿಂಚು ಮೂಡಿಸಿದ ಈ ನಿಯತಕಾಲಿಕೆ ಸಾಹಿತ್ಯ ವಲಯದ ಒಂದು ಮೈಲಿಗಲ್ಲು.

–– "ಪ್ರಬುದ್ಧ ಕರ್ಣಾಟಕದಂತಹ ಸಾಹಿತ್ಯ ಸಂಚಿಕಗಳ ಪ್ರಕಟಣೆಯ ಹೊಣೆ ಹೊತ್ತು, ಕಾಲಕಾಲಕ್ಕೆ ಹೊಸ ಹೊಸ ವಿಷಯಗಳನ್ನೂ ಲೇಖಕರನ್ನೂ ಹುಡುಕಿ ಬರೆಯಿಸುವ ಪ್ರತಿಭಾಶೋಧದ ಕೆಲಸವನ್ನು ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಇವರ ಉತ್ತಮ ಅಭಿರುಚಿ, ಪ್ರಕಟಣೆಯ ಕಾಳಜಿಗಳಿಗೆ ಒಂದೇ ಒಂದು ಉತ್ತಮ ನಿದರ್ಶನವೆಂದರೆ ಕೆ.ಎಸ್. ನರಸಿಂಹಸ್ವಾಮಿಯವರ ಮೈಸೂರು ಮಲ್ಲಿಗೆಯ ಪ್ರೇಮ ಕವಿತೆಗಳನ್ನು ಮೆಚ್ಚಿ ಆಯ್ದು ಸೊಗಸಾದ ವಿನ್ಯಾಸದೊಂದಿಗೆ ಪ್ರಬುದ್ಧ ಕರ್ಣಾಟಕದಲ್ಲಿ ಅಚ್ಚು ಹಾಕಿಸಿದ ಕೀರ್ತಿ ವೆಂಕಣ್ಣಯ್ಯನವರಿ'ಗೆ ಸಲ್ಲುತ್ತದೆ."[4]

**4. ಪ್ರೊ.ಅ.ರಾ.ಮಿತ್ರ, ಸ್ಮರಣೀಯರು, ಟಿ.ಎಸ್.ವೆಂಕಣ್ಣಯ್ಯ ಪುಟ–05 (2006)**

ಮೈಸೂರು ವಿಶ್ವವಿದ್ಯಾಲಯದ ಜೊತೆ ಜೊತೆಗೆ ಹೆಜ್ಜೆ ಇಟ್ಟು ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ಪ್ರಬುದ್ಧ ಕರ್ಣಾಟಕ ನಿಯತಕಾಲಿಕೆಯದು. ಇದರ ಕೇಂದ್ರಬಿಂದು ಎನಿಸಿದ ಟಿ.ಎಸ್.ವೆಂಕಣ್ಣಯ್ಯನವರ ಸಾಹಿತ್ಯ ಪ್ರಸಾರ ಕಾರ್ಯವನ್ನು ಕುವೆಂಪು, ಮಾಸ್ತಿ, ಡಿ.ವಿ.ಜಿ. ಪುತಿನ, ತೀನಂಶ್ರೀ, ಬಿ.ಎಂ.ಶ್ರೀ, ಎ.ಎನ್.ಮೂರ್ತಿರಾವ್, ವಿ.ಸೀ ಮುಂತಾದ ಎಲ್ಲ ಸಾಹಿತ್ಯ ಚಿಂತಕರ ಪಂಕ್ತಿ ಗೌರವದಿಂದ ಅಭಿನಂದಿಸಿದೆ. ಅವರು ಅನೇಕರ ಬರಹಕ್ಕೆ ಪ್ರೇರಣೆಯನ್ನು ನೀಡುತ್ತಿದ್ದುದು ಮಾತ್ರವಲ್ಲದೆ ಬರಹದ ದಿಕ್ಕನ್ನೂ ಸೂಚಿಸುತ್ತಿದ್ದರು. ಸದ್ದಿಲ್ಲದೆ ತಿದ್ದುವುದು ಅವರ ವ್ಯಕ್ತಿತ್ವದ ಒಂದು ಮುಖವಾಗಿತ್ತೆಂದು ಪ್ರೊ. ಅ.ರಾ ಮಿತ್ರ ಕೃಷ್ಣಶಾಸ್ತ್ರಿಗಳನ್ನು ಸ್ಮರಿಸಿದ್ದಾರೆ "ಪ್ರಬುದ್ಧ ಕರ್ಣಾಟಕಕ್ಕೆ ಎ.ಆರ್.ಕೃಷ್ಣಶಾಸ್ತ್ರಿಗಳು ತಂದೆ, ಟಿ.ಎಸ್.ವೆಂಕಣ್ಣಯ್ಯನವರು ತಾಯಿ" ಎಂಬುದು ವರಕವಿ ದ.ರಾ.ಬೇಂದ್ರೆಯವರ ಮಾತು.




ಪ್ರಬುದ್ಧ ಕರ್ಣಾಟಕ (1986)




ಪ್ರಬುದ್ಧ ಕರ್ಣಾಟಕ (2015)

### ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಪ್ರಮುಖ ಪ್ರಕಟಣೆಗಳು

| ಲೇಖಕರು | ಕೃತಿಗಳು | ವರ್ಷ |
|---|---|---|
| ಮೈಸೂರು ಸೀತಾರಾಮಶಾಸ್ತ್ರಿ | ಪ್ರತಿಮಾನಾಟಕ | 1922 |
| ಡಿ.ವಿ.ಗುಂಡಪ್ಪ | ವಸಂತಕುಸುಮಾಂಜಲಿ ನಿವೇದನ | 1923 |
| ಎಂ.ಡಿ.ಅಳಸಿಂಗರಾಚಾರ್ | ಕರ್ನಾಟಕ ಸ್ವಪ್ನವಾಸವದತ್ತ ನಾಟಕಂ | 1925 |
| ಸಂಸ | ವಿಗಡವಿಕ್ರಮರಾಯ | 1925 |
| ಬಿ.ಎಂ.ಶ್ರೀಕಂಠಯ್ಯ | ಗದಾಯುದ್ಧ ನಾಟಕಂ | 1926 |
| ಎ.ಆರ್ ಕೃಷ್ಣಶಾಸ್ತ್ರಿ | ಭಾಸಕವಿ | 1933 |
| ಬೆಂಗಳೂರಿನ ತಮಾಷೆ ಬಂಗಲೆ | ಕೆ.ಅನಂತಸ್ವಾಮಿ ರಾವ್ | 1950 |
| ಮಲೆನಾಡಿನ ಚಿತ್ರಗಳು | ಕುವೆಂಪು | 1933 |
| ಪ್ರತಿಜ್ಞಾ ಯೌಗಂಧರಾಯಣ | ಎಲ್.ಗುಂಡಪ್ಪ | 1937 |
| ಕೈಲಾಸವೂ ಮಾನಸ ಸರೋವರವೂ | ಬಿ.ಎನ್. ಶ್ರೀನಿವಾಸಯ್ಯ | 1950 |
| ಬಾಲಸರಸ್ವತಿ | ವಿದ್ಯಾರ್ಥಿಗಳ ಬರವಣಿಗೆಗಳು | **** |
| ಗಂಧದ ಹುಡಿ | ವಿದ್ಯಾರ್ಥಿಗಳ ಬರವಣಿಗೆಗಳು | **** |

### ಕ್ರೈಸ್ಟ್ ಕನ್ನಡ ಸಂಘ

21–12–1972 ರಿಂದ 22–07–2008 ರವರೆಗೆ ಕ್ರೈಸ್ಟ್ ಕಾಲೇಜು ಕನ್ನಡ ಸಂಘ

22–07–2008 ರಿಂದ 20–11–2017 ರವರೆಗೆ ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ

20–11–2017 ರಿಂದ ಈಚೆಗೆ ಕ್ರೈಸ್ಟ್ ಡೀಮ್ಡ್ ಟು ಬಿ ಕನ್ನಡ ಸಂಘ

ಕಾಲೇಜುಗಳಲ್ಲಿ 'ಕರ್ನಾಟಕ ಸಂಘ' ಗಳ ಪರಿಕಲ್ಪನೆ ಪ್ರಾರಂಭವಾದುದೇ 'ಸೆಂಟ್ರಲ್ ಕಾಲೇಜು ಕನ್ನಡ ಸಂಘ' ದ ಮೂಲಕ. ಕ್ರೈಸ್ಟ್ ಕಾಲೇಜಿನಲ್ಲಿ, ಕನ್ನಡ ಸಂಘ ಆರಂಭಗೊಂಡಿದ್ದರಿಂದ ಪ್ರಾರಂಭದಲ್ಲಿ ಕನ್ನಡ ಸಂಘವು 'ಕ್ರೈಸ್ಟ್ ಕಾಲೇಜು ಕನ್ನಡ ಸಂಘ' ಎಂದೇ ಪರಿಚಿತವಾಯಿತು. ನಂತರದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ತಂತ್ರಜ್ಞಾನ ಕಾಲಿಟ್ಟ ಪರಿಣಾಮವಾಗಿ ಶಿಕ್ಷಣದ ಪ್ರತಿಯೊಂದು ರಂಗದಲ್ಲಿ ಮಹತ್ತರ ಬದಲಾವಣೆಗಳು ಘಟಿಸಿದವು. ಡಿಜಿಟಲ್ ಯುಗದಲ್ಲಿ ಬದಲಾವಣೆಗಳು ಅಗತ್ಯವೂ ಅನಿವಾರ್ಯವೂ ಆಗಿ ಪಲ್ಲಟಗಳು ಕ್ಷಿಪ್ರವಾಗತೊಡಗಿತು. ಶಿಕ್ಷಣ ಸಂಸ್ಥೆಗಳು ಪ್ರಗತಿಯ ನಿಮಿತ್ತ ಹಲವು ಸ್ನಾತಕೋತ್ತರ ಪದವಿ ವಿಭಾಗಗಳನ್ನು ಪ್ರಾರಂಭಿಸಿ ಹೊಸ ಜ್ಞಾನ ಶಾಖೆಗಳಿಗೆ ಅನುವು ಮಾಡಿಕೊಟ್ಟಿತು. ಸಂಶೋಧನೆ ಮತ್ತು ಸಂಶೋಧನಾ ಲೇಖನಗಳ ಪ್ರಕಟಣೆ ಬೋಧನೆಯ ಅಂಗವೆಂದು ಪರಿಗಣಿಸಲ್ಪಟ್ಟಿದ್ದರಿಂದ ಹೆಚ್ಚು ಒತ್ತನ್ನು ಆ ಕಡೆಗೆ ನೀಡಿತು. ಪದವಿ ಕಾಲೇಜುಗಳು ಮೇಲ್ಮಟ್ಟಕ್ಕೆ ಏರಲೇಬೇಕಾದ ಪರಿಸ್ಥಿತಿ ಒದಗಿದಾಗ ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಮಾತ್ರ ಖಾಸಗಿ ಯೂನಿವರ್ಸಿಟಿಗಳಾಗಿ ತಲೆ ಎತ್ತಿದವು. ಹೀಗಾಗಿ 2008 ರಲ್ಲಿ ಕ್ರೈಸ್ಟ್ ಕಾಲೇಜಾಗಿದ್ದ ಸಂಸ್ಥೆ ಕ್ರೈಸ್ಟ್ ಯೂನಿವರ್ಸಿಟಿ ಆಗಿ ಅಭಿಧಾನಗೊಂಡಾಗ ಸಂಘವೂ ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ ಎಂದು ಹೆಸರಾಯಿತು. 2017 ರಲ್ಲಿ ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ ಆಗಿ ಮುಂದುವರೆದಿದೆ.

'ಒಂದು ಕಾಲೇಜು ಶೈಕ್ಷಣಿಕವಾಗಿ ಎಷ್ಟೇ ಒಳ್ಳೆಯ ಕೆಲಸ ಮಾಡುತ್ತಿದ್ದರೂ ಅದರ ಪ್ರಸಿದ್ಧಿಗೆ ಅದರ ಪಠ್ಯೇತರ ಚಟುವಟಿಕೆಗಳೇ ಕಾರಣ ಎಂಬುದನ್ನು ಮರೆಯುವಂತಿಲ್ಲ'–ಎಂಬ ಹ. ಮಾ. ನಾಯಕರ ಮಾತಿನಂತೆ ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಪುಸ್ತಕ ಪ್ರಕಟಣೆ ಮತ್ತು ಸ್ಪರ್ಧೆಗಳ ಮೂಲಕವೇ ಪ್ರಸಿದ್ಧಿ ಪಡೆದಿದೆ.

ಕ್ರೈಸ್ಟ್ ಕನ್ನಡ ಸಂಘ, ಇತಿಹಾಸ ಪ್ರಸಿದ್ಧ ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಪ್ರತಿರೂಪ ಹಾಗೂ ಪ್ರತಿಬಿಂಬ. ಅದರ ಕುಡಿಗಳೇ ಇಲ್ಲಿ ಚಿಗುರೊಡೆದು ಹೆಗ್ಗುರುತು ಮೂಡಿಸಿರುವುದು ಸಂಘದ ಚಟುವಟಿಕೆಗಳ ಮೂಲಕ ಸ್ಪಷ್ಟವಾಗಿದೆ. ಜಿ.ಪಿ.ರಾಜರತ್ನಂ ಅವರ ಕಾರ್ಯವೈಖರಿ ಮತ್ತು ದೂರದೃಷ್ಟಿ ಶ್ರೀ ಜಿ. ಶ್ರೀನಿವಾಸರಾಜು ಅವರಿಗೆ ಪರಿಚಯವಿತ್ತು. ಮಾತ್ರವಲ್ಲದೆ ರಾಜರತ್ನಂ ಸಮಕಾಲೀನರ ಮತ್ತು ಅವರ ಹಿರಿಯರ ಧ್ಯೇಯೋದ್ದೇಶಗಳು ಕನ್ನಡ ಸಂಘದ ಸ್ಥಾಪನೆಯೊಂದಿಗೆ ಸಾಫಲ್ಯಗೊಂಡಿದೆ. 'ಈಗ ವಾಮನನಾಗಿರುವ ಕ್ರೈಸ್ಟ್ ಕಾಲೇಜು ಕನ್ನಡ ಸಂಘವು ಕಾಲಕ್ರಮದಲ್ಲಿ ತ್ರಿವಿಕ್ರಮನಾಗುವ ಬಗ್ಗೆ ಸಂದೇಹವಿಲ್ಲ' ಎಂಬ ಜಿ.ಪಿ.ರಾಜರತ್ನಂ ಅವರ ಭರವಸೆಯನ್ನು ಕನ್ನಡ ಸಂಘ ಈಡೇರಿಸಿದೆ.

### ಕ್ರೈಸ್ಟ್ ಡೀಮ್ಡ್ ಟು ಬಿ ಕನ್ನಡ ಸಂಘದ ಹೆಗ್ಗಳಿಕೆ

1. ಕ್ರೈಸ್ಟ್ ಕಾಲೇಜು ಆಡಳಿತ ಮಂಡಳಿಯ ಸಂಪೂರ್ಣ ಸಹಾಯ ಸಹಕಾರಗಳೊಂದಿಗೆ ಕ್ರೈಸ್ಟ್ ಕಾಲೇಜು ಕನ್ನಡ ಸಂಘ ತನ್ನ ಕಾರ್ಯವ್ಯಾಪ್ತಿಯನ್ನು ಅಖಿಲ ಕರ್ನಾಟಕ ಮಟ್ಟಕ್ಕೆ ವಿಸ್ತರಿಸಿ, ಹೊಸ ಪೀಳಿಗೆಯ ಹಾದಿಗೆ ಸೂಕ್ತ ವೇದಿಕೆಯನ್ನು ರೂಪಿಸಿಕೊಟ್ಟದ್ದು.
2. ಅನಕೃ ಸ್ಮಾರಕ ಸ್ಪರ್ಧೆ, ಬೇಂದ್ರೆ ಸ್ಮೃತಿ ಕವನ ಸ್ಪರ್ಧೆಗಳ ಮೂಲಕ, ಸಂಘ ಅಖಂಡ ಕರ್ನಾಟಕದ ವಿದ್ಯಾರ್ಥಿಗಳನ್ನು ಒಳಗುಮಾಡಿಕೊಂಡು ಸೃಜನಾತ್ಮಕ ಬರವಣಿಗೆಗೆ ಪ್ರೇರೇಪಿಸಿದ್ದು.
3. ಕಾಲೇಜು ವಿದ್ಯಾರ್ಥಿಗಳ ಯೋಗ್ಯ ಬರವಣಿಗೆಗಳನ್ನು ಗುರುತಿಸಿ, ಪ್ರಕಾಶಿಸಿ ಪುಸ್ತಕ ಬಹುಮಾನದ ಮೂಲಕ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಹೆಚ್ಚಿಸಿ ಪ್ರಸಿದ್ಧ ಬರಹಗಾರರಾಗಲು ನೆರವಾಗಿದ್ದು
4. ಯುವ ಲೇಖಕರ ಬರವಣಿಗೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಸಾಹಿತ್ಯವಲಯಕ್ಕೆ ಪರಿಚಯಿಸಿದ್ದು.
5. ಸುಪ್ರಸಿದ್ಧ ಲೇಖಕರು, ಕವಿಗಳು, ವಿಚಾರವಾದಿಗಳು, ಚಿಂತಕರು ಹಾಗೂ ನಾಟಕಕಾರರನ್ನು ಕನ್ನಡ ಸಂಘಕ್ಕೆ ಆಹ್ವಾನಿಸಿ ಅವರಿಂದ ಪುಸ್ತಕ ಬಿಡುಗಡೆಗೊಳಿಸಿ ತನ್ಮೂಲಕ ಯುವಕರಿಗೆ ಅವರ ಸಂಪರ್ಕ ಕಲ್ಪಿಸಿದ್ದು.
6. ಪುಸ್ತಕಗಳ ಬಳಿ ಓದುಗರೇ ಹೋಗಬೇಕು ಎನ್ನುವುದಕ್ಕಿಂತ ಪುಸ್ತಕಗಳೇ ಓದುಗರ ಬಳಿ ಹೋಗಬೇಕು ಎನ್ನುವುದು

ಕನ್ನಡ ಸಂಘದ ಧ್ಯೇಯವಾದ್ದರಿಂದ ಅಂದಿನ ಸಂದರ್ಭದಲ್ಲಿ ಮೌಲ್ಯಮಾಪನ ಕೇಂದ್ರ ಹಾಗೂ ಸಾಹಿತ್ಯ ಸಮಾರಂಭಗಳು ಜರಗುವ ತಾಣಗಳನ್ನೇ ಮಾರಾಟ ಕೇಂದ್ರಗಳನ್ನಾಗಿ ಗುರುತಿಸಿಕೊಂಡಿದ್ದು.

7. ವರಕವಿ ದ.ರಾ. ಬೇಂದ್ರೆಯವರ ಜನ್ಮದಿನವನ್ನೇ (ಜನವರಿ 31) **'ಕವಿದಿನ'** ವೆಂದು ಘೋಷಿಸಿ ಪುಸ್ತಕ ಬಿಡುಗಡೆಗೆ ಸಮಾರಂಭ ಆಯೋಜಿಸಿದ್ದು
8. ಅಂದಿನ ಸಂದರ್ಭದಲ್ಲಿ ಒಂದು ಅಕಾಡೆಮಿ, ಒಂದು ಪರಿಷತ್ತು ಅಥವಾ ಒಂದು ಯೂನಿವರ್ಸಿಟಿ ಮಾಡಬೇಕಾದ ಕಾರ್ಯವನ್ನು ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ತನ್ನ ಪರಿಧಿಯೊಳಗೆ ಮಾಡಿ ಈವರೆಗೂ 247 ಮೌಲಿಕ ಪುಸ್ತಕಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ್ದು
9. ಎಚ್.ಎಸ್. ಶಿವಪ್ರಕಾಶ್, ನಟರಾಜ್ ಹುಳಿಯಾರ್, ಮೊಗಳ್ಳಿ ಗಣೇಶ್, ರಹಮತ್ ತರೀಕರೆ, ಅಬ್ದುಲ್ ರಶೀದ್, ಪ್ರತಿಭಾನಂದಕುಮಾರ್, ಪಿ.ಚಂದ್ರಿಕ, ತೇಜಸ್ವಿನ ನಿರಂಜನ, ಅಂಕುರ್ ಬೆಟಗೇರಿ, ವಿಕ್ರಮ ವಿಸಾಜಿ ಮೊದಲಾದ ಇಂದಿನ ಪ್ರತಿಭಾನ್ವಿತ ಬರಹಗಾರರನ್ನು ಕನ್ನಡ ಸಂಘದ ಮೂಲಕ ಬೆಳಕಿಗೆ ತಂದದ್ದು
10. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ನಾಟಕ ಅಕಾಡೆಮಿಯ ಪ್ರಶಸ್ತಿಗಳು ಮಾತ್ರವಲ್ಲದೆ ಇತರ ಅನೇಕ ಪ್ರಶಸ್ತಿಗಳು ಕನ್ನಡ ಸಂಘದ ಪ್ರಕಟಣಾ ಕೃತಿಗಳಿಗೆ ಲಭಿಸಿದ್ದು
11. ಕನ್ನಡ ಸಂಘ ಪ್ರಕಟಿಸಿದ ಪುಸ್ತಕಗಳು ಬೆಂಗಳೂರು ವಿಶ್ವವಿದ್ಯಾನಿಲಯದ ಪದವಿ ತರಗತಿಗಳಿಗೆ ಪಠ್ಯಪುಸ್ತಕಗಳಾಗಿ ನಿಯೋಜಿಸಿದ್ದು.
12. ಕ್ರೈಸ್ಟ್ ಕನ್ನಡ ಸಂಘದ ಮಾದರಿಯಲ್ಲಿ ಬೆಂಗಳೂರಿನ ಹಾಗೂ ಕರ್ನಾಟಕದ ಸುತ್ತಮುತ್ತಲಿನ ಪದವಿ ಕಾಲೇಜುಗಳಲ್ಲಿ ಕನ್ನಡ ಸಂಘವನ್ನು ಸ್ಥಾಪಿಸಲು ಸಂಘ ಪ್ರೇರಣೆಯಿತ್ತದ್ದು
13. ಪುಸ್ತಕ ಪ್ರಕಟಣೆಯ ಮೂಲಕ ಸಂಸ್ಥೆಯ ಧ್ಯೇಯ ವಾಕ್ಯವಾದ **'ಶ್ರೇಷ್ಠತೆ ಮತ್ತು ಸೇವೆ'** (ಇಘಿಛಿಜುಟಟಜುಟಿಛಿಜ ಚಿಟಿಜ ಖಜುಡಿತಿಛಿಜ) ಯನ್ನು ತನ್ಮೂಲಕ ಸಾರ್ಥಕಗೊಳಿಸಿದ್ದು
14. ಕವಿತೆ ನಾಟಕ ಸಣ್ಣಕಥೆ ಪ್ರಬಂಧ ಅನುವಾದ ವಿಮರ್ಶೆ ಮತ್ತು ಪಿ.ಎಚ್‌ಡಿ ಪ್ರಬಂಧಗಳನ್ನೊಳಗೊಂಡಂತೆ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಕನ್ನಡ ಸಂಘದ ಮೂಲಕ ಪ್ರಕಟಿಸುತ್ತಿರುವುದು
15. 1998 ರಲ್ಲಿ ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ಸಂಘಕ್ಕೆ ಅತ್ಯುತ್ತಮ ಪ್ರಕಾಶನ ಪ್ರಶಸ್ತಿ ಲಭಿಸಿದ್ದು.

ಕಾಲಕಾಲಕ್ಕೆ ಕನ್ನಡ ಸಂಘವು ತನ್ನ ಕಾರ್ಯವೈಖರಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುತ್ತ ಮುಂದುವರೆಯುತ್ತಿದೆ. ಅವುಗಳೆಂದರೆ

1. ಬಹುಮಾನಿತ ವಿದ್ಯಾರ್ಥಿಗಳಿಗೆ ಪ್ರಯಾಣ ಭತ್ಯೆ ನೀಡಿ ಸಮಾರಂಭಕ್ಕೆ ಆಹ್ವಾನಿಸುವುದು
2. ಉತ್ತಮ ಕೃತಿಗಳ ಪ್ರಕಟಣೆಯ ಸಂದರ್ಭದಲ್ಲಿ ಪ್ರಸಿದ್ಧ ಲೇಖಕರುಗಳಿಗೆ ಗೌರವಧನ ನೀಡುವುದು
3. ಪ್ರಕಟಿತ ಪುಸ್ತಕಗಳನ್ನು ಬಿಡುಗಡೆಯ ಸಂದರ್ಭದಲ್ಲಿ ಶೇಕಡ 50 ರಿಯಾಯಿತಿ ನೀಡುವುದರ ಮೂಲಕ ಓದುಗರನ್ನು ಪ್ರೋತ್ಸಾಹಿಸುವುದು
4. ಸ್ಪರ್ಧೆಗೆ ಬಂದ ಕವಿತೆಗಳು ಹಾಗೂ ಬರವಣಿಗೆಗಳನ್ನು ಮೌಲ್ಯಮಾಪನ ಮಾಡುವ ಮೌಲ್ಯಮಾಪಕರಿಗೆ ಉಚಿತ ರೀತಿಯಲ್ಲಿ ಗೌರವಿಸುವುದು.

ಈ ಹೆಗ್ಗಳಿಕೆಗಳಿಂದಲೇ ಕನ್ನಡ ಸಂಘ ತೃಪ್ತಿಪಟ್ಟುಕೊಳ್ಳದೆ ಉತ್ತಮ ಸಾಂಸ್ಕೃತಿಕ ಕೇಂದ್ರವಾಗಿಯೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಯುವಕರನ್ನು ಶ್ರೇಷ್ಠ ಬರಹಗಾರನ್ನಾಗಿ ರೂಪಿಸುವತ್ತ ಗಮನಹರಿಸಿದೆ. ಕಳೆದ 46 ವರ್ಷಗಳಿಂದಲೂ ಕನ್ನಡ ಸಂಘದ ಏಳಿಗೆ ಅಭಿವೃದ್ಧಿಗಳು ಸಂಸ್ಥೆಯ ನಿರಂತರ ಸಲಹೆ ಸಹಾಯ ಪ್ರೋತ್ಸಾಹಗಳಿಂದಲೇ ಮುಂದುವರೆಯುತ್ತಿರುವುದು ಕನ್ನಡ ಸಾಹಿತ್ಯಾಭಿಮಾನದ ಕುರುಹು. ಪ್ರೊ. ಜಿ. ಶ್ರೀನಿವಾಸರಾಜು ಅವರ ಸ್ನೇಹಿತರೂ ನಿಕಟವರ್ತಿಗಳೂ ಆದ ಡಾ. ಎಚ್.ಎಸ್.ರಾಘವೇಂದ್ರರಾವ್ ಅವರು ಸಂಘದ ಪ್ರಾರಂಭದ ದಿನದಿಂದ ಇಂದಿನವರೆಗೂ ಅಮೂಲ್ಯ ಸಲಹೆಗಳ ಮೂಲಕ ದಾರಿತೋರುತ್ತಿರುವುದು ಕನ್ನಡ ಸಂಘದ ಮುನ್ನಡೆಗೆ ಕಾರಣವಾಗಿದೆ. ಅಂತೆಯೇ ಇಂದಿನ ಉಪಕುಲಪತಿಗಳಾದ ರೆ.ಫಾ.ಡಾ.ಥಾಮಸ್ ಸಿ. ಮ್ಯಾಥ್ಯು ಕುಲಸಚಿವರಾದ ಡಾ. ಅನಿಲ್ ಜೋಸೆಫ್ ಪಿಂಟೊ ಮತ್ತು ವಿತ್ತಾಧಿಕಾರಿಗಳಾಗಿದ್ದ ರೆ.ಫಾ.ಡಾ.ವರ್ಗಿಸ್ ಅವರುಗಳ ಕನ್ನಡ ಪರ ಕಾಳಜಿ ಮತ್ತು ಆಸ್ಥೆ ಕನ್ನಡ ಸಂಘದ ಹಿರಿಮೆಗೆ ಪ್ರತ್ಯಕ್ಷ ಕಾರಣವಾಗಿದ್ದರೆ ಸಂಸ್ಥೆಯ ಎಲ್ಲ ಫಾದರ್‌ಗಳು, ಕನ್ನಡ ವಿಭಾಗ, ಅಧ್ಯಾಪಕ ವರ್ಗ, ಕನ್ನಡ ಸಂಘದ ಸಂಚಾಲಕರು, ವಿದ್ಯಾರ್ಥಿಗಳು ಮತ್ತು ಎಲ್ಲ ಹಿತೈಷಿಗಳು ಪರೋಕ್ಷವಾಗಿ ಕನ್ನಡ ಸಂಘದ ಬೆಳವಣಿಗೆಗೆ ಕಾರಣರಾಗಿದ್ದಾರೆ.

2018–2019 ರಲ್ಲಿ ಕ್ರೈಸ್ಟ್ ಸಂಸ್ಥೆ ತನ್ನ ಸುವರ್ಣಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಈ ಸುಸಂದರ್ಭದಲ್ಲಿ ಕನ್ನಡ ಸಂಘ ನೂತನ ನಿರ್ಣಯಗಳನ್ನು ಜಾರಿಮಾಡಲು ಅವಕಾಶವಿದೆ. ಪ್ರಾಯಶ: ಕನ್ನಡ ಸಂಘ ಹುಟ್ಟಿಕೊಂಡ ಸಂದರ್ಭದಲ್ಲಿದ್ದ ಸವಾಲುಗಳು ಈ ಸಂದರ್ಭಕ್ಕೆ ಸವಾಲಾಗಿ ಕಾಣುವುದಿಲ್ಲ. ಪುಸ್ತಕ ಪ್ರಕಟಣೆ ಪ್ರಸ್ತುತ ಸಂದರ್ಭದಲ್ಲಿ ಮಹತ್ವದ ವಿಷಯವಲ್ಲ. ಆಧುನಿಕ ತಂತ್ರಜ್ಞಾನದ ಫಲವಾಗಿ ಮುದ್ರಣಕಾರ್ಯ ಸುಲಭವೂ ಸಾಧುವೂ ಆಗಿ ಶ್ರೀ ಸಾಮಾನ್ಯನ ಬೇಡಿಕೆಗಳನ್ನು ಈಡೇರಿಸುವಲ್ಲಿ ಫಲಕಾರಿಯಾಗಿದೆ. ಆಧುನಿಕ ಸಂದರ್ಭದಲ್ಲಿ ಯಾವ ಸಂಘಟನೆ ಕಾಲಘಟ್ಟಕ್ಕನುಗುಣವಾಗಿ ಸ್ಥಿತ್ಯಂತರಗೊಳ್ಳುತ್ತದೊ ಆ ಸಂಘಟನೆಗಳು ಮಾತ್ರ ನೂರ್ಕಾಲ ನಿಲ್ಲಬಲ್ಲವುಗಳಾಗಿರುತ್ತವೆ. ಇಂದಿನ ಬೇಡಿಕೆಗಳು ಅವಶ್ಯಕತೆಗಳು ಮತ್ತು ಸವಾಲುಗಳು ಬೇರೆಯೇ ಆಗಿರುವುದರಿಂದ ಅವುಗಳನ್ನು ಪೂರ್ಣಮಾಡುವುದೆ ಸಂಘಟನೆಗಳ ಮುಂದಿರುವ ಸವಾಲು.

**ಕನ್ನಡ ಸಂಘದ ಕೆಲವು ಗಮನಾರ್ಹ ಪ್ರಕಟಣೆಗಳು**

| | |
|---|---|
| ಕಿ. ರಂ. ನಾಗರಾಜ | ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ |
| ಕುಂ. ವೀರಭದ್ರಪ್ಪ | ಕೊಟ್ರ ಹೈಸ್ಕೂಲಿಗೆ ಸೇರಿದ್ದು |
| ಡಾ. ಬಸವರಾಜ ಕಲ್ಗುಡಿ | ನಕ್ಷೆ ನಕ್ಷತ್ರ |
| ಡಾ. ಎ. ಎನ್. ಮೂರ್ತಿರಾವ್ | ಸಮಗ್ರ ಲಲಿತ ಪ್ರಬಂಧಗಳು |
| (ಸಂ) ವಿಕ್ರಮ ವಿಸಾಜಿ | ಮತ್ತೆ ಬಂತು ಶ್ರಾವಣ– ದ.ರಾ.ಬೇಂದ್ರೆ ಸ್ಪರ್ಧೆಯ ಬಹುಮಾನಿತ ಕವನಗಳ ಸಂಗ್ರಹ |
| ಡಾ. ಕೆ.ಸಿ. ಶಿವಾರೆಡ್ಡಿ | ಇದು ಎಂಥಾ ಹಾಡು ! |
| ಡಾ. ಎಚ್.ಎಸ್.ಶಿವಪ್ರಕಾಶ್ | ಅಣುಕ್ಷಣಚರಿತೆ |
| ವೈದೇಹಿ | ಹೂವ ಕಟ್ಟುವ ಕಾಯಕ |
| ಡಾ.ಕೆ.ವಿ. ನಾರಾಯಣ | ಭಾಷೆಯ ಸುತ್ತ ಮುತ್ತ |
| ಸು.ರಂ.ಎಕ್ಕುಂಡಿ | ಬಕುಲದ ಹೂಗಳು |

**ಮುಕ್ತಾಯ:** ಅನಂತ ಆಶೋತ್ತರಗಳನ್ನು ಹೊತ್ತು ಉದಯಿಸಿದ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ ಈಗ ಕಣ್ಮರೆಯಾಗಿದೆ. ಆದರೆ ಸಂಘ ಉಂಟು ಮಾಡಿದ ಸಂಚಲನ ಹಾಗೂ ಉದ್ದೀಪನಗಳು ಮಾತ್ರ ಅವಿಸ್ಮರಣೀಯ. ಶತಮಾನ ಕಳೆದರೂ ಅದು ಇಟ್ಟ ಹೆಜ್ಜೆ ಮತ್ತು ನಡೆದ ದಾರಿ ಉಳಿದ ಸಂಘಟನೆಗಳಿಗೆ ಮಾರ್ಗದರ್ಶಿ. ಅನಂತ ಸಾಹಿತ್ಯಾಸಕ್ತರನ್ನು ಲೇಖಕರನ್ನು ರೂಪಿಸಿದ ಖ್ಯಾತಿಗೆ ಪಾತ್ರವಾಗಿರುವ ಸಂಘಟನೆಯನ್ನು ಅರ್ಥಪೂರ್ಣವಾಗಿ ಸ್ಮರಿಸಿಕೊಳ್ಳುವುದೇ ನಿಜವಾದ ಶತಮಾನೋತ್ಸವ ಆಚರಣೆ.

**ಪರಾಮರ್ಶನ ಕೃತಿಗಳು**


1. ಬಿ.ಜಿ.ಎಲ್ ಸ್ವಾಮಿ, ಪಂಚಕಲಶಗೋಪುರ, ಸೆಂಟ್ರಲ್ ಕಾಲೇಜು, ಕರ್ನಾಟಕ ಸಂಘ ಬೆಂಗಳೂರು (1964)
2. ತೀ.ನಂ. ಶ್ರೀಕಂಠಯ್ಯ, ಪ್ರಬಂಧ, 'ಕಾಸಿನ ಸಂಘ' – ಹೂಬುಟ್ಟಿ, ಲಲಿತ ಪ್ರಬಂಧಗಳ ಸಂಕಲನ (1987)
3. ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಎ.ಆರ್. ಕೃಷ್ಣಶಾಸ್ತ್ರಿ, ಕೇಂದ್ರ ಸಾಹಿತ್ಯ ಅಕಾದೆಮಿ (2000)
4. ಅಂತರ್ಜಲ, ಜಿ.ಶ್ರೀನಿವಾಸರಾಜು ಅಭಿನಂದನಾ ಗ್ರಂಥ (ಸಂ) ಜಿ.ಎಸ್.ಶಿವರುದ್ರಪ್ಪ, ಶ್ರೀನಿವಾಸರಾಜು ಅಭಿನಂದನಾ ಸಮಿತಿ, ಬೆಂಗಳೂರು (2007)
5. ಪ್ರೊ ಅ.ರಾ. ಮಿತ್ರ, ಸ್ಮರಣೀಯರು, ವಸಂತ ಪ್ರಕಾಶನ (2008)
6. ಎಂ,ಗೋಪಾಲಕೃಷ್ಣ ಅಡಿಗ, ಕನ್ನಡದ ಅಭಿಮಾನ ಮತ್ತು ಇತರ ಲೇಖನಗಳು, ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ (1972)
7. ಕುವೆಂಪು, ಮನುಜಮತ ವಿಶ್ವಪಥ, ಉದಯರವಿ ಪ್ರಕಾಶನ, ಮೈಸೂರು (1971)
8. ಹೂಬುಟ್ಟಿ, ಲಲಿತಪ್ರಬಂಧಗಳ ಸಂಕಲನ, (ಸಂ) ಕೆ.ಎಸ್.ಮಧುಸೂದನ, ಎಚ್.ಎನ್. ಮುರಳೀಧರ ಕರ್ನಾಟಕ ಸಂಘ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು (1987)
9. ಪುಸ್ತಕ ಲೋಕದ ಅನನ್ಯರು, ಕಾಲೇಜು ಕನ್ನಡ ಸಂಘಗಳ ಪ್ರಕಟಣೆಗಳು, (ಸಂ) ಶಶಿಕಲ, ಪ್ರಕಟಣೆ ಅಭಿನವ ಎನ್. ರವಿಕುಮಾರ್ (2008)
10. ಪ್ರಬುದ್ಧ ಕರ್ನಾಟಕ, ಸಂಪುಟ–67, ಸಂಚಿಕೆ–1, (ಪ್ರಧಾನ ಸಂ) ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಸಾರಾಂಗ, ಮೈಸೂರು ವಿ,ವಿ ಮಾನಸಗಂಗೋತ್ರಿ, ಮೈಸೂರು (1985)
11. ಪ್ರಬುದ್ಧ ಕರ್ನಾಟಕ, ಸಂಪುಟ–92, ಸಂಚಿಕೆ–355, (ಸಂ) ಪ್ರೀತಿ ಶ್ರೀಮಂಧರ್ ಕುಮಾರ್, ಕೆ. ಎನ್. ಗಂಗಾನಾಯಕ್, ಜಿ.ಆರ್.ತಿಪ್ಪೇಸ್ವಾಮಿ, ಪ್ರಕಟಣೆ, ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು (2015)
12. ಬಿ.ಎಸ್.ಕೇಶವರಾವ್, ಮರೆಯಲಾಗದವರು, ಐಬಿಎಚ್ ಪ್ರಕಾಶನ, ಪ್ರಥಮ ಮುದ್ರಣ (2001)
13. ಜಿ. ಶ್ರೀನಿವಾಸರಾಜು, ಆಗಾಗ (ಸಾಹಿತ್ಯ ಪರಿಚಾರಿಕೆಯ ನಡುವಿನ ಮಾತು–ಬರಹ) ಅಭಿನವ ಪ್ರಕಾಶನ (2009)
14. ಸಾಲು ದೀಪಗಳು, (ಸಂ) ಜಿ.ಎಸ್.ಸಿದ್ಧಲಿಂಗಯ್ಯ, ಎಂ.ಎಚ್.ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–02 (1990)